**IN THE COURT OF THE SENIOR CIVIL JUDGE AND JMFC, TIPTUR.**

**MVC No. 1411/2023**

**PW-1**

**Oath is administered to the witness on 05.07.2025**

**Cross Examination by: Sri S.K. for N.V.N. Counsel for Respondent No.2:**

ನನ್ನ ಮಗ ಚಾಲನೆ ಮಾಡುತ್ತಿದ್ದ ಗಾಡಿ ಡಿಯೋ ಹೋಂಡೋ ಗಾಡಿ ಆಗಿದೆ. ಅದರ ಸಂಖ್ಯೆ ನನಗೆ ನೆನಪಿರುವುದಿಲ್ಲ. ಅರಸೀಕೆರೆ - ತಿಪಟೂರು ನಡುವೆ ಅಪಘಾತ ಆಗಿತ್ತು ಎಂದರೆ ನಿಜ. ಅದು ಹೆಚ್ಚು ವಾಹನ ಸಂಚಾರ ಇರುವಂತಹ ರಸ್ತೆ ಆಗಿದೆ ಎಂದರೆ ನಿಜ. ನನ್ನ ಮಗನಿಗೆ ಗಾಡಿ ಓಡಿಸಲು ಬಾರದೇ ಇದ್ದುದರಿಂದ ಯಾವುದೋ ಒಂದು ವಾಹನಕ್ಕೆ ಹೋಗಿ ಡಿಕ್ಕಿ ಮಾಡಿದ್ದಾನೆ ಎಂದರೆ ಸರಿಯಲ್ಲ. ಆತನೇ ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿಕೊಂಡು ಅಪಘಾತ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಆತ ಆ ದಿನ ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಆತನ ಬಳಿ ಡಿ ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಆತ ದ್ವಿತೀಯ ಪಿ ಯು ಸಿ ಓದಿದ್ದಾನೆ. ಆತನ ಶಾಲಾ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ಆತನಿಗೆ 32 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ.

ಅಪಘಾತದ ನಂತರ ಆತನಿಗೆ ತಿಪಟೂರಿನ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿತ್ತು. ನಾವು ಪೊಲೀಸರ ಮತ್ತು ವೈದ್ಯರ ಬಳಿ ಅಪಘಾತದ ಬಗ್ಗೆ ಮಾಹಿತಿ ಕೊಡಲಾಗಿತ್ತು. ನನ್ನ ಮಗನಿಗೆ ತಿಂಗಳಿಗೆ 24 ಸಾವಿರ ಆದಾಯ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಕಂಪನಿಯ ಅಧಿಕಾರಿಗಳಿಗೆ ಸಾಕ್ಷಿ ಮಾಡಿಸಲು ತೊಂದರೆ ಇಲ್ಲ. ಆ ದಿನ ವರುಣ್ ಎನ್ನುವ ವ್ಯಕ್ತಿಯು ಸಹ ಗಾಡಿಯಲ್ಲಿ ಹೋಗುತ್ತಿದ್ದ ಎಂದರೆ ನಿಜ. ಆತನಿಗೆ ಸಣ್ಣ-ಪುಟ್ಟ ಗಾಯಗಳು ಆಗಿದ್ದವು.

ಮೃತನ ಶವಸಂಸ್ಕಾರಕ್ಕೆ ಒಂದು ಲಕ್ಷ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುದಾರನ ಸಹಾಯ ತೆಗೆದುಕೊಂಡು ನಾನು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

Re-Examination NIL

**(R.O.A & I.C.)**

SD/-
**(Mohamed Arifulla C.F)**
SENIOR CIVIL JUDGE JMFC,
TIPTUR